ಶ್ರೀ ಜೆ.ಎ. ಫರ್ನಾಂಡಿಸ್ : ಅಧ್ಯಕ್ಷರೇ, ನಾನು ಇಂಗ್ಲೀಷಿನಲ್ಲಿ ಮಾತನಾಡುತ್ತೇನೆ.

ಅಧ್ಯಕ್ಷರು : ಮಾತನಾಡಿ, ತೊಂದರೆಯಿಲ್ಲ.

(ಅ) ಫ್ಲಾಟ್ಸ್‌ಗಳ ಅಂಡರ್ ವ್ಯಾಲ್ಯುಯೇಷನ್ ನೋಂದಣಿ ಬಗ್ಗೆ

ಶ್ರೀ ಜೆ.ಎ. ಫರ್ನಾಂಡಿಸ್ : Mr. Speaker Sir, Considerable loss of revenue to government due to undervaluation of flats in Bangalore city. From time to time, advertisements have been appearing...

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಇಂಗ್ಲೀಷನಲ್ಲಿ ಮಾತನಾಡುವುದಕ್ಕೆ ಅವರಿಗೆ ತಾವು ಅನುಮತಿಯನ್ನು ಕೊಡುತ್ತಿದ್ದೀರಿ. ಅವರಿಗೆ ಕನ್ನಡ ಬರುತ್ತದೆ. ದಯವಿಟ್ಟು ಕನ್ನಡದಲ್ಲಿ ಮಾತನಾಡಲು ಹೇಳಿ.

ಅಧ್ಯಕ್ಷರು : ಜೆ.ಎ. ಫರ್ನಾಂಡಿಸ್‌ರವರಿಗೆ ಕನ್ನಡ ಬರುತ್ತದೆ ಎಂದು ನೀವು ಹೇಳುವುದಾದರೆ ಇನ್ನು ದೇವರೇ ಕಾಪಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಬರುತ್ತದೆ ಅವರಿಗೆ.

ಅಧ್ಯಕ್ಷರು : ಮಾತನಾಡುವುದಕ್ಕೆ ಆಗುತ್ತದೆ. ಓದುವುದಕ್ಕೆಲ್ಲಾ ಬರುತ್ತದೆಯೇ? ಅವರು ಈ ಸದನದ ನಾಮಿನೇಟರ್ ಸದಸ್ಯರು, ಆಂಗ್ಲೋ ಇಂಡಿಯನ್ ಕಮ್ಯೂನಿಟಿಯಿಂದ ಬರುತ್ತಾರೆ. ಅವರು ಇಲ್ಲಿ ಬಂದಿರುವುದೇ ಈ ಕಾರಣಕ್ಕಾಗಿ. ಅವರಿಗೆ ಕನ್ನಡ ಓದುವುದಕ್ಕೆ ಬರುವ ಹಾಗಿದ್ದರೆ ನನ್ನದೇನೂ ಆಕ್ಷೇಪಣೆ ಇಲ್ಲ. ನಾನು ಹಷ್ಮಿ ಕೈಯಲ್ಲಿ ಕನ್ನಡದಲ್ಲಿ ಮಾತನಾಡಿಸಲು ಪ್ರಯತ್ನ ಪಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಇತ್ತೀಚಿನ ದಿನಗಳಲ್ಲಿ ಇಂಗ್ಲೀಷ್ ಜಾಸ್ತಿಯಾಗುತ್ತಿದೆ, ಕನ್ನಡ ಸಾಯುತ್ತಿದೆ.

ಅಧ್ಯಕ್ಷರು : ಏನೂ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಕನ್ನಡ ಬರುತ್ತದೆ, ನನ್ನ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಅವರು ಕನ್ನಡದಲ್ಲಿ ಮಾತನಾಡಲು ತಯಾರಿದ್ದಾರೆ. ಅವರಿಗೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಭಾವೋದ್ವೇಗದಿಂದ ಪ್ರಶ್ನೆಯನ್ನು ಬಗೆಹರಿಸತಕ್ಕಂಥಾದ್ದಲ್ಲ. ಸಾಮಾನ್ಯವಾಗಿ ಅವರನ್ನು ನೀವು ನೇರವಾಗಿ ಓದಬಹುದು ಎಂದು ಹೇಳಿ ಬಿಟ್ಟರೆಲ್ಲ, ಅದು ನನಗೆ ತಕ್ಷಣ ಶಾಕ್ ಆಯಿತು.

ಅಧ್ಯಕ್ಷರು : ಈಗ ಖರ್ಗೆಯವರು ಕೇಳಿದರೆ ಒಪ್ಪಿಕೊಳ್ಳುವುದಿಲ್ಲ, ಜಾಲಪ್ಪನವರು ಕೇಳಿದರೆ ಒಪ್ಪಿಕೊಳ್ಳುವುದಿಲ್ಲ, ಅವರಿಗೆ ನಾನು ಯಾವ ರೀತಿ ಸಹಾಯ ಮಾಡಲಿ. ಅವರು ಈ ಸದನದ ಸದಸ್ಯರಾಗಿರುವಾಗ ಅವರ ರಕ್ಷಣೆಗೆ ನಾನು ಬರಬೇಕೋ? ಬೇಡವೋ. ಅವರಿಗೆ ಕನ್ನಡ ಓದುವುದಕ್ಕೆ ಬರುವುದಿಲ್ಲ ಎಂದು ನನಗೆ ಗೊತ್ತಿದೆ. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕು ಎಂದರೆ ಈ ಸದನದಲ್ಲಿ, ಇಲ್ಲ ಇಲ್ಲ, ನೀವು ಇಂಗ್ಲೀಷಿನಲ್ಲಿ ಮಾಡುವುದಕ್ಕೆ ಬರುವುದಿಲ್ಲ, ಕನ್ನಡದಲ್ಲೇ ಮಾಡಿ ಎಂದರೆ ಅವರು ಮಾಡಲಿಕ್ಕಾಗದೆ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಅಲ್ಲಿಗೆ ನಾನು ಈ ಸದನದ ಸದಸ್ಯರಾಗಿರತಕ್ಕಂಥವರಿಗೆ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಅವಕಾಶವಿಲ್ಲದ ಹಾಗೆ ಮಾಡಿದಂತಾಗುತ್ತದೆ. ನಾನು ಈ ರೀತಿ ಮಾಡಿದರೆ ನನಗೆ ಗೌರವಕ್ಕೆ ಕಡಿಮೆಯಾದರೆ ನಿಮಗೆ ಜಾಸ್ತಿ ಅಪಾಯ ಅದರಿಂದ..

Sri J.A. FERNANDES : Considerable loss of revenue to government due to undervaluation of flats in Bangalore city :-

From time to time, advertisements have been appearing in the press, indicating the prices of flats, ranging from 30 lakhs, 40 lakhs, etc., upwards, depending upon the locality.

In order to avoid losses running into crores of rupees to the exchequer, the Sub-Registrars concerned should register the flats only in the names of the buyers, on the basis of the agreed sale prices, so that the correct stamp duty is collected, rather than the present system, whereby an out-dated evaluation is taken as the basis.

Government is losing between 70 to 80% stamp duty by incorrect evaluation, especially on flats built on prime locations.

To illustrate this point, I refer to S.I. Property advertisment in Deccan Herald dated 11.12.1995 for "Scottsdale" on Haines Road, at Rs. 41.44 lakhs per flat upwards and give below the calculations :

1) What should be : 1350 Sq. ft. at Rs. 3,060/- per sq. ft.

Rs. 41,44,000/-

2) Actual calculation based on present official evaluations :

Land value : 675 Sq.ft. at Rs. 587/- per sq. ft. Rs. 3,96,225/-

Super built area : 1350 Sq. ft. at Rs. 350/- per sq.ft. Rs. 4,72,500/-

Rs. 8,68,725/-

Tax, instead of being levied on Rs. 41.44 lakhs is being charged only on Rs. 8.69 lakhs. (Rs. 32.75 lakhs is left out of the tax net.)

If the tax is collected on the actual value of the flat, the Government can increase collections by hundreds of crores of rupees, especially taking into account the large number of flats yet to be registered and new flats under construction in Bangalore city.

Besides, occupancy certificates must be issued by the Bangalore City Corporataion**only in the name** of the flat buyers**AFTER REGISTRATION IS COMPLETED**, rather than the present practice of making out these certificates in the name of the Builder-Developer.

Using a cut-off date as 1.4.1994, it is suggested that a House Committee be appointed to look into all such cases immediately.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, The Government is aware of the .....

ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನಾದರೂ ಕನ್ನಡದಲ್ಲಿ ಕೊಡಲಿ. ಆಡಳಿತ ಭಾಷೆ ಕನ್ನಡ ಎಂದು ಹೇಳುತ್ತೀರಿ. ಸರ್ಕಾರದವರೇ ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟರೆ ಹೇಗೆ ?

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕನ್ನಡದಲ್ಲಿ ಹೇಳಬೇಕು.

ಅಧ್ಯಕ್ಷರು : ನೀವು ಕನ್ನಡದಲ್ಲಿ ಉತ್ತರವನ್ನು ಹೇಳಿ. ಅದರ ಟಿಕ್ಸ್ಟ್ ಹೇಳಿ ಸಾಕು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹೇಳಿರುವ ವಿಷಯ ನಿಜ. ಅನ್‌ಡಿವೈಡೆಡ್ ಷೇರ್ ಮೇಲೆ ರಿಜಿಸ್ಟ್ರೇಶನ್ ಆಗುತ್ತಾ ಇದೆ. ಈಗ ನಾವು ಹಣ ಕಳೆದುಕೊಳ್ಳುತ್ತಾ ಇದ್ದೇವೆ. ಈಗಾಗಲೇ ನಮ್ಮವರನ್ನು ಕಳುಹಿಸಿ ಪ್ರತಿಯೊಂದರಲ್ಲೂ ಏನೇನು ಅನಾಹುತ ಆಗುತ್ತಿದೆಯೆಂದು ಹೇಳಿ, ಫ್ಲಾಟ್ ಓನರ್ಸ್‌ನ್ನು ಒಂದು ಸಾರಿ ಕರೆಯಿಸಿ ಈ ಸಿಸ್ಟಮ್‌ನ್ನು ಚೇಂಜ್ ಮಾಡುವುದು ಹೇಗೆ ಎಂದು ಹೇಳಿ. ಒಂದು ಸಿಸ್ಟಮ್‌ನ್ನು ನಾವು ಎವಾಲ್ವ್ ಮಾಡುತ್ತಿದ್ದೇವೆ. ಇದರ ಜೊತೆಗೆ ಒಂದು ತನಿಖಾದಳವನ್ನು ಕೂಡ ನಾವು ಮಾಡುತ್ತಿದ್ದೇವೆ. ಇನ್ನು ಮುಂದೆ ಹೋಗುವುದಾದರೆ ಪ್ರತಿಯೊಂದು

ಎಕ್ಸ್‌ಟೆನ್ಸ್‌ನ್‌ನಲ್ಲಿ, ಪ್ರತಿಯೊಂದು ಸ್ಟೀಟ್‌ನಲ್ಲಿ ಈಗಿನ ಮಾರ್ಕೆಟ್ ಬೆಲೆ ಏನಿದೆ ಎನ್ನುವುದನ್ನು ವ್ಯಾಲ್ಯು ಮಾಡಿ ನಾವು ಗೈಡ್‌ಲೈನ್ಸ್ ನೀಡುತ್ತಿದ್ದೇವೆ. ಬಹುಶಃ ಇದನ್ನು 8-10 ದಿವಸದಲ್ಲಿ ಫೈನಲೈಸ್ ಮಾಡಿ ಕ್ಯಾಬಿನೆಟ್ ಮುಂದೆ ತರುತ್ತಿದ್ದೇನೆ. ಏನೇನು ಲೀಕೇಜಸ್ ಇದೆ ಅದನ್ನು ಪ್ಲಗ್ ಮಾಡುವುದಕ್ಕೆ ಎಲ್ಲಾ ಕ್ರಮ ಕೈಗೊಳ್ಳುತ್ತಿದ್ದೇವೆ. ಈಗ ಅಂಡರ್ ವ್ಯಾಲ್ಯುಸ್ ಎಲ್ಲೆಲ್ಲಿ ಆಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ ಅದನ್ನೆಲ್ಲ ಸೆಕ್ಷನ್ 45ಎ ಅಡಿಯಲ್ಲಿ ಅಂಡರ್ ವ್ಯಾಲ್ಯುವಿಷನ್ ಆಫೀಸರ್‌ಗೆ ಕಳುಹಿಸಿ ಅದರ ಮೇಲೆ ಕ್ರಮ ಕೈಗೊಳ್ಳುತ್ತಾ ಇದ್ದೇವೆ.

(೫) ಹೆಗ್ಗಡದೇವನಕೋಟೆ ತಾಲ್ಲೂಕು ಮೇಟಿಕುಪ್ಪೆ ಅರಣ್ಯ ಪ್ರದೇಶದಲ್ಲಿ ಮರದ ನಾಟಾಗಳು ಕಳ್ಳ ಸಾಗಾಣಿಕೆ

ಶ್ರೀ ಎನ್. ನಾಗರಾಜು (ಹೆಗ್ಗಡದೇವನಕೋಟೆ ಕ್ಷೇತ್ರ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಹೆಗ್ಗಡದೇವನಕೋಟೆ ತಾಲ್ಲೂಕು, ಮೇಟಿಕುಪ್ಪೆ ಅರಣ್ಯ ಪ್ರದೇಶದಲ್ಲಿ ಸುಮಾರು 800 ರಿಂದ 100 ಲಾರಿ ಲೋಡಷ್ಟು ಮರದ ನಾಟಾಗಳು ಕಳ್ಳ ಸಾಗಾಣಿಕೆಯಾಗಿರುವುದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರು ಇವರ ಗಮನಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೈಕೊಂಡ ಕ್ರಮಗಳೇನು ಹಾಗೂ ಎಷ್ಟು ಮರದ ನಾಟಾಗಳ ಕೇಸನ್ನು ದಾಖಲಿಸಿದ್ದಾರೆ, ಅವುಗಳ ವಿವರ ನೀಡುವುದು; ಇಷ್ಟೊಂದು ದೊಡ್ಡ ಪ್ರಮಾಣದ ಕಳ್ಳ ಸಾಗಾಣಿಕೆಯಾಗುತ್ತಿದ್ದರೂ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆ ಹಾಗೂ ಅವರು ಕೈಗೊಂಡ ಕ್ರಮಗಳೇನು? ಸುಮಾರು 30 ರಿಂದ 40 ಲಕ್ಷ ರೂ. ನಷ್ಟವನ್ನು ಸರ್ಕಾರಕ್ಕೆ ಯಾರು ಭರಿಸಬೇಕು? ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಹುಣಸೂರು ಇವರು ಕಾಕನ ಕೋಟೆ ಅರಣ್ಯ ಪ್ರದೇಶದಿಂದ (ಹೆಗ್ಗಡದೇವನ ಕೋಟೆ ತಾಲ್ಲೂಕು) ಮರಗಳನ್ನು ಹುಣಸೂರು ಟಿಂಬರ್ ಡಿಪೋಗೆ ಸಾಗಿಸಲು ಅನುಮತಿಯನ್ನು ಯಾರು ನೀಡಿದ್ದಾರೆ? ಹೆಗ್ಗಡದೇವನಕೋಟೆ ತಾಲ್ಲೂಕು ಎರೆಹಳ್ಳಿಯ ಟಿಂಬರ್ ಡಿಪೋ ಇದ್ದು ಇಲ್ಲಿ ಶೇಖರಿಸಬೇಕಾಗಿದ್ದ ಮರಗಳನ್ನು 66 ಕಿ.ಮಿ. ದೂರದ ಹುಣಸೂರು ಡಿಪೋಗೆ ಸಾಗಿಸಲು ಕಾರಣಗಳೇನು? ಇದರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು? ಹೆಗ್ಗಡೆದೇವನ ಕೋಟೆ ಜನತೆ ಮರಗಳನ್ನು ಖರೀದಿಸಲು ಎಲ್ಲಿಗೆ ಹೋಗಬೇಕು? ಎರೆಹಳ್ಳಿ ಟಿಂಬರ್ ಡಿಪೋನಲ್ಲಿ ಮರದ ನಾಟಾಗಳಿಲ್ಲದೆ ಅಲ್ಲಿನ ಸಿಬ್ಬಂದ್ದಿ ವೆಚ್ಚಕ್ಕೆ ಆಗುವ ಖರ್ಚು ಎಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹೆಗ್ಗಡದೇವನಕೋಟೆ ತಾಲ್ಲೂಕು ಮೇಟಿಕುಪ್ಪೆ ಅರಣ್ಯ ಪ್ರದೇಶದಿಂದ ಯಾವುದೇ ಮರದ ಕಳ್ಳ ಸಾಗಾಣಿಕೆ ಆಗಿರುವುದಿಲ್ಲ. ಇಲಾಖೆಯ ಅಧಿಕಾರಿಗಳು ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ಜರುಗಿಸುತ್ತಿದ್ದು ಕಳ್ಳಸಾಗಾಣಿಕೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಆರೋಪಿಸಿರುವಂತೆ ಸರ್ಕಾರಕ್ಕೆ ನಷ್ಟ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ.